1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.41/2023

ದಿಃ 14.08.2025

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-5

| | | |
|---|---|---|
| ಹೆಸರು | ಃ | ಶಿವ |
| ತಂದೆಯ ಹೆಸರು | ಃ | ಕರಿಗುಂಡಯ್ಯ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ವಿರೂಪಾಕ್ಷಿಪುರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2ರಿಂದ 6 ನನಗೆ ಗೊತ್ತು. ನಾನು ಆದಿ ಕರ್ನಾಟಕ ಜಾತಿಗೆ ಸೇರಿದವನಾಗಿರುತ್ತೇನೆ. ನ್ಯಾಯಾಲಯದ ಮುಂದೆ ಇರುವಂತಹ 3 ಮತ್ತು 4ನೇ ಆರೋಪಿಗಳ ಪರಿಚಯ ನನಗೆ ಇದೆ. ಅವರು ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಅವರಿಗೆ ನಾನು ಆದಿ ಕರ್ನಾಟಕ ಜಾತಿಗೆ ಸೇರಿದವ ಎಂದು ತಿಳಿದಿದೆ.

2. ವಿರೂಪಾಕ್ಷಿಪುರದ ಸರ್ವೆ ನಂಬರ್.540ರಲ್ಲಿ 2 ಎಕರೆ ಜಮೀನು ನನ್ನ ತಾತನಾದ ಕರಿಯ ಅವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ನನ್ನ ತಾತ ಕರಿಯ 1984ರಲ್ಲಿ ಮರಣ ಹೊಂದಿರುತ್ತಾರೆ. ಹಾಲಿ ಖಾತೆ ಅವರ ಮೊಮ್ಮಕ್ಕಳಾದ ನಮ್ಮ ಹೆಸರನಲ್ಲಿ ಇದೆ. ಸದರಿ ಜಮೀನಿನಲ್ಲಿ ಸುಮಾರು 30

ವರ್ಷ ವಯಸ್ಸಿನ 20 ತೇಗದ ಮರಗಳಿದ್ದು ಅದನ್ನು ನನ್ನ ತಾತ ನೆಟ್ಟಿದ್ದಾಗಿರುತ್ತವೆ. ದಿಃ21.09.2022ರಂದು ಬೆಳಿಗ್ಗೆ ಸುಮಾರು 10.00 ಗಂಟೆ ಸಮಯದಲ್ಲಿ ನಾನು ನನ್ನ ಜಮೀನಿನ ಬಳಿ ಹೋದಾಗ ಆರೋಪಿಗಳು ಮರಗಳನ್ನು ಕಡಿಯುತ್ತಿದ್ದರು. ನಾನು ಯಾತಕ್ಕೆ ಮರ ಕಡಿಯುತ್ತಿದ್ದೀರಿ ಎಂದು ಕೇಳಿದಾಗ ಸದರಿ ವ್ಯಕ್ತಿಗಳು ಈ ಮರ ನಿನ್ನದಲ್ಲ ಇದು ಮಹಾಲಿಂಗ ಅವರಿಗೆ ಸೇರಿದ್ದು ನೀನ್ಯಾಕೆ ಬಂದಿದ್ದೀಯಾ, ಹೊಲೆಯಾ, ದನ ತಿನ್ನೋನೆ ಎಂದು ಬೈದು ಆರೋಪಿ ರಘು ಬೈದಿದ್ದು, ಅದನ್ನು ಕೇಳಿಸಿಕೊಂಡಂತಹ ಆರೋಪಿ ನಾಗೇಶ ಇವನು ಹೊಲೆಯನಾ, ಇವನನ್ನು ಹೊಡೆದು ಹಾಕಿ, ಕಾಗೆಗಳು ಮತ್ತು ಹದ್ದುಗಳು ತಿನ್ನಲಿ ಎಂದು ಹೇಳಿದರು. ಆಗ ಸ್ವಾಮಿ, ಚಿಕ್ಕ, ಪುಟ್ಟೇಗೌಡ ಹಾಗೂ ಇನ್ನಿಬ್ಬರು ವ್ಯಕ್ತಿಗಳು ಅಲ್ಲಿ ಇದ್ದು ಜಗಳ ಬಿಡಿಸಿ ಸಮಾಧಾನ ಮಾಡಿದರು. ಆಗ ನಾನು ವಾಪಸ್ ಬಂದೆ. ಸಂಜೆ ನಾನು ಜಮೀನಿನ ಹತ್ತಿರ ಹೋದಾಗ ಆರೋಪಿ ನಾಗೇಶ ಟ್ರ್ಯಾಕ್ಟರ್ ನಲ್ಲಿ ಮರ ತುಂಬಿಕೊಂಡು ಹೋಗುತ್ತಿದ್ದ. ಆಗ ನಾನು ಅಡ್ಡಗಟ್ಟಿ ವಾಹನದ ಮುಂದೆ ಮಲಗಿದೆ. ಅವರು ನನ್ನ ಮೇಲೆ ವಾಹನ ಹಾಯಿಸಲು ಹೋದಾಗ ನಾನು ತಪ್ಪಿಸಿಕೊಂಡೆ. ನಂತರ ನಾನು 112ಗೆ ಕರೆ ಮಾಡಿದೆ. ಆಗ ಪೊಲೀಸರು ಬಂದು ಟ್ರ್ಯಾಕ್ಟರ್ ಮತ್ತು ಮರವನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋದರು. ಪೊಲೀಸರು ನನ್ನನ್ನು ಮತ್ತು ಆರೋಪಿಗಳನ್ನು ಠಾಣೆಗೆ ಕರೆಯಿಸಿ

ತಿರ್ಮಾನ ಮಾಡುತ್ತೇವೆ ಎಂದು ಹೇಳಿದರು, ಆದರೆ ಆರೋಪಿಗಳು ಪೊಲೀಸ್ ಠಾಣೆಗೆ ಬರಲಿಲ್ಲ. ನಂತರ ದಿಃ03.10.2022ರಂದು ನಾನು ಪೊಲೀಸರಿಗೆ ದೂರು ನೀಡಿದೆ. ಸಾಕ್ಷಿ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿ.ಪಿ.8 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ನನ್ನ ಜಮೀನಿನ ಬಳಿ ಬಂದು ಅಲ್ಲಿ ಮಹಜರ್ ಮಾಡಿ ಫೋಟೋ ತೆಗೆದಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಸ್ಥಳ ಪಂಚನಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿ.ಪಿ.9 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಎರಡು ಫೋಟೋಗಳಲ್ಲಿ ತನ್ನನುನ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.10 ಮತ್ತು 11 ಎಂದು ಗುರುತಿಸಲಾಯಿತು. ಮರಗಳನ್ನು ತುಂಬಿರುವ ಟ್ರ್ಯಾಕ್ಟರ್ ಮತ್ತು ಟ್ರೇಲರ್ ನ್ನು ಸಹ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮರಗಳನ್ನು ತುಂಬಿರುವ 4 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.12ರಿಂದ 15 ಎಂದು ಗುರುತಿಸಲಾಯಿತು. ಎರಡು ಮರವನ್ನು ಕಡತಿದಿದ್ದು ಅದರಿಂದ ನನಗೆ ಸುಮಾಾ 1 ಲಕ್ಷ ರೂಪಾಯಿ ನಷ್ಟವಾಗಿರುತ್ತದೆ. ಆರೋಪಿ ರಘು ಮತ್ತು ನಾಗೇಶ್ ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ.

<u>ಪಾಟೀ ಸವಾಲುಃ ಶ್ರೀ. ಕೆ.ಸಿ.ಎಂ., ವಕೀಲರಿಂದ ಆರೋಪಿಗಳ ಪರವಾಗಿಃ</u>

ನಮ್ಮ ಜಮೀನಿನ ಪಕ್ಕದಲ್ಲಿ ರಘು ಮತ್ತು ನಾಗೇಶ್ ಅವರ ಜಮೀನೂ ಸಹ ಇದೆ ಎಂದರೆ ಸಾಕ್ಷಿ, ರಘು ಅವರ ಜಮೀನು ಇದೆ, ನಾಗೇಶ್ ಅವರ ಜಮೀನು ಇಲ್ಲ ಎಂದು ಉತ್ತರಿಸಿರುತ್ತಾರೆ. ನಾಗೇಶ್ ಅವರ ಅತ್ತೆಯ ಜಮೀನೂ ಸಹ ಇದೆ ಎಂದರೆ ಸರಿ. ನನ್ನ ಜಮೀನಿಗೆ ಹೋಗಲು ರಸ್ತೆ ಇಲ್ಲ ಎಂದರೆ ಸರಿ. ಅಲ್ಲಿ ರಸ್ತೆ ಇಲ್ಲದೇ ಇರುವ ಕಾರಣ, ನನ್ನ ಜಮೀನಿಗೆ ಹೋಗಲು ನಾನು ರಘು ಮತ್ತು ನಾಗೇಶ್ ಅವರ ಅತ್ತೆಯ ಜಮೀನಿನ ಮೂಲಕ ಹೋಗಬೇಕು ಎಂದರೆ ಸರಿ. ನನ್ನ ಜಮೀನಿಗೆ ಬರಲು ಹಳ್ಳ ದಾಟಿಕೊಂಡು ಬರಬೇಕು ಎಂದರೆ ಸರಿ. ಆ ರೀತಿ ನನ್ನ ಜಮೀನನ್ನು ತಲುಪಲು ತುಂಬಾ ದೂರವಾಗುತ್ತದೆ ಎಂದರೆ ಸರಿ. ಅವರ ಜಮೀನನ್ನು ಬಳಸಿಕೊಂಡು ಹೋಗುವುದರಿಂದ ಅವರ ಬೆಳೆಗೆ ತೊಂದರೆಯಾಗುತ್ತಿದ್ದ ಕಾರಣ, ನನ್ನ ಜಮೀನಿಗೆ ಮಾಮೂಲಿ ಯಾವ ರೀತಿ ಹೋಗಬೇಕು ಆ ರೀತಿ ಹಳ್ಳ ಬಳಸಿಕೊಂಡು ಹೋಗಿ ಎಂದು ಆಗಾಗ್ಗೆ ತಕರಾರು ಮಾಡುತ್ತಿದ್ದರು ಎಂದರೆ ಸರಿಯಲ್ಲ.

2. 1932ರಲ್ಲಿ ನನ್ನ ತಾತನಿಗೆ ಜಮೀನು ಮಂಜೂರಾಗಿರುತ್ತದೆ. ಜಮೀನು ಮಂಜೂರಾದಾಗ ನಾನು ಇನ್ನೂ ಹುಟ್ಟಿರಲಿಲ್ಲ ಎಂದರೆ ಸರಿ. ನನ್ನ

ಅಜ್ಜಿ ನಾಗರಾಜು ಅವರಿಗೆ ಜಮೀನು ಮಾರಾಟ ಮಾಡಿದ್ದಾರೆ ಮತ್ತು ಅದನ್ನು ಮಹಾಲಿಂಗ ಅವರು ಉಪಯೋಗಿಸುತ್ತಿದ್ದಾರೆ ಎಂದು ನಾಗರಾಜು ಅವರು ಹೇಳಿಕೊಳ್ಳುತ್ತಿದ್ದಾರೆ. ಸರ್ವೆ ನಂಬರ್ 540ಕ್ಕೆ ಸಂಬಂಧಿಸಿದಂತೆ ಸಿವಿಲ್ ದಾವಾವಿದೆ. ಸಿವಿಲ್ ದಾವಾದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ದಾಖಲಾತಿಯನ್ನು ಕೊಟ್ಟಿರುವುದಿಲ್ಲ. ದೂರು ಕೊಡುವ ಸಮಯದಲ್ಲಿ ಸಿವಿಲ್ ದಾವಾ ಇರಲಿಲ್ಲ. ಸಿವಿಲ್ ದಾವಾವನ್ನು ನಾಗರಾಜು ಅವರು ಸಲ್ಲಿಸಿರುತ್ತಾರೆ. ದಾವಾ ಮಾಡಿದ್ದು ನಿಮ್ಮ ತಿಳುವಳಿಕೆಗೆ ಬಂದ ನಂತರ ದಾವಾದ ದಾಖಲಾತಿಗಳನ್ನು ಪೊಲೀಸರಿಗೆ ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ, ಇಲ್ಲ ಎಂದು ಉತ್ತರಿಸಿರುತ್ತಾರೆ. ನಾಗರಾಜು ಅವರು ಸಿವಿಲ್ ದಾವಾವನ್ನು ನನ್ನ ವಿರುದ್ದ ಸಲ್ಲಿಸಿರುತ್ತಾರೆ. ಸರ್ವೆ ನಂಬರ್ 338ಕ್ಕೆ ಸಂಬಂಧಿಸಿದಂತೆ ನಾಗರಾಜು ದಾವಾ ಮಾಡಿರುತ್ತಾರೆ. ಸರ್ವೆ ನಂಬರ್ 540 ನಾಗರಾಜುಗೆ ಸೇರಿದಂತಹ ಸ್ವತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ್ 540ಕ್ಕೆ ಸಂಬಂಧಿಸಿದಂತೆ ನಿಮ್ಮ ಮಾಲೀಕತ್ವ ಮತ್ತು ಸ್ವಾಧೀನದ ದಾಖಲಾತಿಯನ್ನು ತಹಶೀಲ್ದಾರರಿಂದ ಪಡೆದು ಪೊಲೀಸರಿಗೆ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ, ಹೌದು ಎಂದು ಉತ್ತರಿಸಿರುತ್ತಾರೆ. ನನ್ನ ತಾತ ಮರಣ ಹೊಂದಿ ಈಗ ಸುಮಾರು 41 ವರ್ಷಗಳಾಗಿವೆ. ತೇಗದ ಮರಗಳು ನಮಗೆ ಸೇರಿದ್ದಲ್ಲ, ಅದು ನಾಗರಾಜು ಅವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ

ಹೇಳಿರುವಂತಹ ಜಮೀನಿಗೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ದೂರು ಕೊಡಲು ಯಾತಕ್ಕೆ ತಡವಾಯಿತು ಎಂಬ ವಿಚಾರವನ್ನು ನನ್ನ ದೂರಿನಲ್ಲಿ ಕಾಣಿಸಿರುತ್ತೇನೆ. ಮರ ತುಂಬಲು ತಂದಿದ್ದಂತಹ ಟ್ರ್ಯಾಕ್ಟರ್ ಮತ್ತು ಟ್ರೇಲರ್ ನ ಮಾಲೀಕ ನಾಗೇಶ್ ಆಗಿರುತ್ತಾರೆ. ಸಾಕಿಷ್ಠಿಗೆ ನಿ.ಪಿ.8ರ ದೂರನ್ನು ತೋರಿಸಿದ್ದು ಅದನ್ನು ಓದಿ ನೋಡಿ ವಿಳಂಬದ ಕಾರಣ ಬರೆದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸ್ವಾಮಿ, ಚಿಕ್ಕ, ಪುಟ್ಟೇಗೌಡ ಹಾಗೂ ಇನ್ನಿಬ್ಬರು ವ್ಯಕ್ತಿಗಳು ನಮ್ಮ ಪಕ್ಕದ ಊರಿನವರಾಗಿರುತ್ತಾರೆ. ಅವರನ್ನು ಮಹಜರ್ ಗೆ ಮತ್ತು ಸಾಕ್ಷಿ ಹೇಳಲು ನಾನೇ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ನಾಗರಾಜು ಅವರು ನನಗೆ ಫೋನ್ ಮಾಡಿ ಅವರ್ಯಾಕೆ ಮರ ಕಡಿಯಬೇಕು, ಅದೇನು ಅವರದ್ದಾ ಎಂದು ಹೇಳಿದ. ನಾಗರಾಜು ಮತ್ತು ಮಹಾಲಿಂಗನ ನಡುವೆ ಸರ್ವೆ ನಂಬರ್ 540ಕ್ಕೆ ಸಂಬಧಿಸಿದಂತೆ ಸಿವಿಲ್ ದಾವಾ ಇದ್ದು ಅದು ಈಗಾಗಲೇ ಮಹಾಲಿಂಗನವರಂತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸ್ವಾಧೀನದಲ್ಲಿ ಮಹಾಲಿಂಗ ಅವರೇ ಇದ್ದಾರೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಹೋಗಲು ಆರೋಪಿಗಳು ಅಡ್ಡಿಪಡಿಸುತ್ತಿದ್ದಾರೆ ಎಂಬ ಕಾರಣದಿಂದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ದೂರು ದಾಖಲಾದ ನಂತರ ನಾನು ಸರ್ಕಾರದಿಂದ ಪರಿಹಾರದ ಹಣ ಪಡೆದಿರುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ದೂರು

ಕೊಟ್ಟರೆ ಸರ್ಕಾರದಿಂದ ಪರಿಹಾರ ಸಿಗುತ್ತದೆ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಜಮೀನಿಗೂ ಆರೊಪಿಗಳಿಗೂ ಯಾವುದೇ ಸಂಬಂಧವಿಲ್ಲ ಹಾಗೂ ಅವರು ನನ್ನೊಂದಿಗೆ ಜಗಳವಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಮರ ಕಡಿಯುತ್ತಿದ್ದಂತಹ ವ್ಯಕ್ತಿಗಳು ಯಾರ್ಯಾರು ಎಂದು ಗೊತ್ತಿಲ್ಲ. ಆರೋಪಿಗಳು ಮರ ಕಡಿಯುತ್ತಿರಲಿಲ್ಲ, ಮರ ಕಡಿಸುತ್ತಿದ್ದರು. ಆರೋಪಿಗಳ ಜಮೀನಿನ ಮೂಲಕ ನಾನು ನನ್ನ ಜಮೀನಿಗೆ ಹೋಗುವುದಕ್ಕೆ ತಕರಾರು ಮಾಡಿದ್ದಾರೆ ಎಂಬ ಕಾರಣದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮರ ಕಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.